ಓ.ಎಸ್. ನಂ.103/2021
ಡಿ. ಡಬ್ಲ್ಯೂ-1

<u>ದಿನಾಂಕಃ **30-09-2024**</u>

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ವಾದಿಯರ ಪರ ವಕೀಲರಾದ ಶ್ರೀ.ಎಂ.ವಿ ರವರಿಂದ

1 ನೇವಾದಿ ಯಾರು ಇರುತ್ತಾರೆ ಎಂದು ನನಗೆ ಗೊತಿರುತ್ತದೆ ಅವರು ನನ್ನ ಅತ್ತೆಯಾಗಬೇಕು. 2 ನೇವಾದಿಯು ನನ್ನ ಮೈದುನ ಆಗುತ್ತಾನೆ ಎಂದರೆ ಸರಿ. 3 ಮತ್ತು 4 ನೇ ವಾದಿಯರು ನಾದೀನಿಯರು ಆಗರುತ್ತಾರೆ. 5 ನೇ ವಾದಿಯು ನನ್ನ ಮೈದುನ ಆಗುತ್ತಾರೆ. 2 ರಿಂದ 4 ನೇ ಪ್ರತಿವಾದಿಯರು ನನ್ನ ಮಕ್ಕಳು ಇರುತ್ತಾರೆ ಎಂದರೆ ಸರಿ.

ನನ್ನ ಗಂಡನ ಗಂಗಪ್ಪ ಇರುತ್ತದೆ ಎಂದರೆ ಸರಿ. 1 ನೇವಾದಿಯ ಗಂಡನ ಮೊದಲನೇಯ ಮಗ ನನ್ನ ಗಂಡ ಇರುತ್ತಾನೆ ಎಂದರೆ ಸರಿ. ನಮ್ಮಗೆ ಸರ್ವೆ ನಂಃ 52 ರಲ್ಲಿ 4 ಎಕರೆ 32 ಗುಂಟೆ ಜಮೀನು ಇರುತ್ತದೆ. ಸರ್ವೆ ನಂಃ 56/2 ರಲ್ಲಿ 2 ಎಕರೆ 20 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ನನ್ನ ಮಾವನಾದ ರಾಮಲಿಂಗಪ್ಪನ ತಂದೆಯ ಹೆಸರು ಮೊನಪ್ಪ ಇರುತ್ತದೆ ಎಂದರೆ ಸರಿ. ಮೊನಪ್ಪನಿಗೆ ಮೂರು ಮಕ್ಕಳು ಇರುತ್ತಾರೆ ಎಂದರೆ ಸರಿ. ಅವರ ಹೆಸರುಗಳು ರಾಮಲಿಂಗಪ್ಪ, ಮರೆಪ್ಪ ಮತ್ತು ಪ್ರಕಾಶ ಇರುತ್ತವೆ ಎಂದರೆ ಸರಿ. ನನ್ನ ಮಾವನಾದ ರಾಮಲಿಂಗಪ್ಪನ ಮೊದಲನೇಯ ವೆಂಕಟಮ್ಮ ಇದ್ದರು ಎಂದರೆ ಸರಿ. ವೆಂಕಟಮ್ಮ ರವರ ಮಗ ನನ್ನ ಗಂಡನಾದ ಗಂಗಪ್ಪ ಇರುತ್ತಾನೆ ಎಂದರೆ ಸರಿ. ರಾಮಲಿಂಗಪ್ಪರವರ ಮೊದಲನೇಯ ಹೆಂಡತಿಯಾದ ವೆಂಕಟಮ್ಮ ರವರು ಮೃತಪಟ್ಟ ನಂತರ ದೇವಿಕಮ್ಮ ರವರು ಮದುವೆ ಆಗಿರುತ್ತಾರೆ ಎಂದರೆ ಸಾಕ್ಷಿಯು ರಾಮಲಿಂಗಪ್ಪರವರ ಮೊದಲನೇಯ ಹೆಂಡತಿಯು ವೆಂಕಟಮ್ಮ, ವೆಂಕಟಮ್ಮ ರವರು ಆದ ನಂತರ ಬಸ್ಸಮ್ಮ, ಬಸ್ಸಮ್ಮ ಆದ ನಂತರ ದೇವಿಕಮ್ಮ ರವರನ್ನು ರಾಮಲಿಂಗಪ್ಪ ರವರು ಮದುವೆ ಆಗಿರುತ್ತಾರೆ ಎಂದು ಹೇಳುತ್ತಾರೆ. ವೆಂಕಟಮ್ಮ ಜೀವಂತ ಇರುವಾಗ ರಾಮಲಿಂಗಪ್ಪ ರವರು ಬಸ್ಸಮ್ಮ ರವರನ್ನು ಮದುವೆ ಮಾಡಿಕೊಂಡಿದ್ದರು

ಅವರಿಗೆ ಒಂದು ಮಗು ಇತ್ತು ಬಸ್ಸಮ್ಮ ಮತ್ತು ಅವರ ಮಗ ಮೃತಪಟ್ಟಿರುತ್ತಾರೆ ನಂತರ ವೆಂಕಟಮ್ಮ ಜೀವಂತ ಇರುವಾಗ ದೇವಿಕಮ್ಮ ರವರನ್ನು ರಾಮಲಿಂಗಪ್ಪರವರು ಮದುವೆ ಮಾಡಿಕೊಂಡಿರುತ್ತಾರೆ. ನನ್ನ ಅತ್ತೆಯಾದ ವೆಂಕಟಮ್ಮ ರವರು ಮೃತಪಟ್ಟು 7 ವರ್ಷಗಳು ಆಗಿರುತ್ತವೆ. ವೆಂಕಟಮ್ಮ ಮೃತಪಟ್ಟ ನಂತರ ದೇವಿಕಮ್ಮ ರವರನ್ನು ರಾಮಲಿಂಗಪ್ಪ ರವರು ಮದುವೆ ಆಗಿದ್ದರು ಸಹ ನಾನು ವೆಂಕಟಮ್ಮ ಜೀವಂತ ಇರುವಾಗ ರಾಮಲಿಂಗಪ್ಪ ರವರು ವೆಂಕಟಮ್ಮ, ಬಸ್ಸಮ್ಮ ಮತ್ತು ದೇವಿಕಮ್ಮ ರವರನ್ನು ಮದುವೆ ಮಾಡಿಕೊಂಡಿರುತ್ತಾರೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ರಾಮಲಿಂಗಪ್ಪ ರವರು ಬಸ್ಸಮ್ಮ ರವರನ್ನು ಮದುವೆ ಆಗಿದ್ದರು ಎಂದು ತೋರಿಸಲು ಈ ದಾವೆಯಲ್ಲಿ ನಿವೇನದ್ದರೂ ಕಾಗದ ಪತ್ರವನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹಾಜರುಪಡಿಸಿರುತ್ತೇನೆ ಎಂದು ಹೇಳುತ್ತಾರೆ. ನನ್ನ ಮದುವೆಯು ಆಗುವ ಕಾಲಕ್ಕೆ ವೆಂಕಟಮ್ಮ ರವರು ಮೃತಪಟ್ಟಿದ್ದರು ಎಂದರೆ ಸರಿಯಲ್ಲ. ವೆಂಕಟಮ್ಮ ರವರು ಕಳೆದ 7 ವರ್ಷಗಳ ಹಿಂದೆ ಮೃಟಪಟ್ಟಿರುತ್ತಾರೆ ಎಂದು ತೋರಿಸಲು ಈ ದಾವೆಯಲ್ಲಿ ನೀವು ಏನದರೂ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿವೀರಾ ಎಂದರೆ ಸಾಕ್ಷಿಯು ವೆಂಕಟಮ್ಮ ರವರು ತವರು ಮನೆಯಲ್ಲಿ ಮೃತಪಟ್ಟಿರುತ್ತಾರೆ ಎಂದು ಹೇಳುತ್ತಾರೆ. ವೆಂಕಟಮ್ಮ ರವರು 7 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ.

1968-69 ನೇ ಸಾಲಿನಲ್ಲಿ ಮೊನಪ್ಪ ತಂದೆ ಗಂಗಪ್ಪ ರವರು ಸರ್ವೆ ನಂಃ 47-48-52 ನೇದ್ದನ್ನು ಖರೀದಿ ಮಾಡಿದ್ದರು ಎಂದರೆ ಸಾಕ್ಷಿಯು ಸುಮ್ಮನಿ ಇರುತ್ತಾರೆ. ಸಾಕ್ಷಿಯು ಮುಂದುವರೆದು ಹಿರಿಯ ಆಸ್ತಿ ಇರುವುದಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂಃ 47-48-52 ನೇದ್ದು ಹಿರಿಯ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂಃ 52 ರಲ್ಲಿ ಇರುವ 2 ಎಕರೆ 20 ಗುಂಟೆ ಜಮೀನು ಹಿರಿಯ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಖಂಡಿಕ್ಕೆ 5 ರಲ್ಲಿ ದಾವಾದ ಆಸ್ತಿಗಳು ಹಿರಿಯರ ಆಸ್ತಿಗಳು ಇರುತ್ತವೆ ಎಂದು ನಾನು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂಃ 25/5 ಹಿರಿಯ ಆಸ್ತಿ ಇತ್ತು ಎಂದರೆ ಸರಿ. ಸರ್ವೆ ನಂಃ 25/5 ರಲ್ಲಿ ಇರುವ ಜಮೀನನ್ನು ನಾವೆಲ್ಲರೂ ಸೇರಿ ಮಾರಾಟ ಮಾಡಿ ಹಣವನ್ನು

ಹಂಚಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾದ ಆಸ್ತಿಗಳು ಹಿರಿಯ ಆಸ್ತಿಗಳು ಇರುತ್ತವೆ ಎಂದು ಹೇಳಿ ಭಾಗ ಕೋರಿ ವಾದಿಯರು ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಭಾಗ ಬರುವುದಿಲ್ಲ ಎಂದು ಹೇಳುತ್ತಾರೆ.

ಸರ್ವೆನಂಃ 56 ರಲ್ಲಿ ಇರುವ 2 ಎಕರೆ 20 ಗುಂಟೆ ಜಮೀನು ರಸ್ತೆಯ ಸಲುವಾಗಿ ಭೂಸ್ವಾ ಧೀನ ಮಾಡಿಕೊಳ್ಳಲು ನೋಟೀಸ್ ನ್ನು ಕೋಟ್ಟಿರುತ್ತಾರೆ. ಸರ್ವೆ ನಂಃ 56 ರಲ್ಲಿ ಇರುವ 2 ಎಕರೆ 20 ಗುಂಟೆ ಜಮೀನು ಪಿತ್ರಾರ್ಜಿತ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಗಂಡನ್ನು ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಸರ್ವೆ ನಂಃ 56 ರಲ್ಲಿರುವ ಜಮೀನನ್ನು ನನ್ನ ಗಂಡನ್ನು ಖರೀದಿ ಮಾಡಿರುತ್ತಾನೆ ಎಂದು ತೋರಿಸಲು ಖರೀದಿ ಕಾಗದ ಪತ್ರವನ್ನು ಈ ಪ್ರಕರಣದಲ್ಲಿ ನಾನು ಹಾಜರುಪಡಿಸಿರುತ್ತೇನೆ ಎಂದು ಹೇಳುತ್ತಾರೆ.

ವಾದಿಯರು ದಾವಾದ ಆಸ್ತಿಯಲ್ಲಿ ಪಾಲು ಬರುತ್ತದೆ ಎಂದು ಕೋರಿ ದಾವೆಯನ್ನು ಸಲ್ಲಿಸಿದ್ದರು ಸಹ ನಾನು ಅವರಿಗೆ ಭಾಗ ಬರುವುದಿಲ್ಲ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮುಖಾಂತರ ಬೆರಳಚ್ಚುಗಾರಳಿಂದ ಬೆರಳಚ್ಚು ಮಾಡಿಸಲಾಯಿತು)

**ಓ. ಹೇ. ಕೇ. ಸರಿ ಅದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು,
ಯಾದಗಿರಿ